# IN THE COURT OF THE PRL. DISTRICT AND SESSIONS JUDGE, BAGALKOTE

SC. No.10/2023

| | | | |
|---|---|---|---|
| Name | : | Dr. Vikas Parvatikar | P.W-17 |
| Father's name | : | Bapurao | CW-29 |
| Age | : | 41 Years | |
| Occupation | : | Medical Officer, District Hospital, Bagalkot. | |
| Resident of | : | Bagalkot | |

Witness duly sworn on 08.01.2026

**Examination-in-Chief by learned Public Prosecutor**

Since 29.08.2020 to 29.08.2023 I was working as Senior Specialist at Taluka Hospital, Bilagi.

On 01.12.2022 I received a requisition from CPI, Bagalkot Rural Circle, to conduct postmortem on the dead body of one Rangavva. On the basis of said requisition I have conducted postmortem on the dead body of Rangavva from 16.30 to 18.30.

As per the examination, the deceased was aged about 29 years, moderately built and poorly nourished. Rigormorties present in the upper and lower limbs. Postmortem lividity also present over back of trunk, thighs, buttocks, calf region and occipital scalp and close examination, I noticed the following injuries on the body;

1] Superficial grazed like abrasion over tip of nose measuring 12x1 cm, red in colour and fresh.

2] Superficial abrasion over abdomen measuring 2x1/4 cm, brown colour.

3] Superficial injury over right forearm measuring ½ x ½ cm, contusion marks, reddish brown colour.

**On internal examination:**

1] Brain covering intact. When the covering was opened she had sustained subdural hemorrhage to the left side over left fronto temporo parietal region around 50 ml dark blood in fluid state is present.

2] Underlying brain contusion over left fronto temporo parietal region present.

The above said injuries are in antimortem in nature and the cause of death is acute sub-dorsal hemorrhage over left fronto temporo parietal region with underlying fronto temporo parietal region due to injuries sustained leading to cardio-respiratory arrest. The time of death is around 18 to 24 hours prior to examination. Now I am seeing the postmortem report issued by me the same is marked as Ex.P-18 and my signature is marked as Ex.P-18(a).

On 10.02.2023 our hospital received a requisition along with accused to ascertain if the injuries sustained to the deceased are likely to occur if a person assaults the deceased over the head by hands. On the basis of said requisition, the accused was examined by myself and one Dr. V. M Kuntoji, forensic expert and we have furnished joint opinion that there is possibility of occurrence of intracranial injuries/bleeding and /or

death if hit by bare hands or impact of severe nature to a harder surface of object. Now I am seeing the requisition and opinion furnished by us, the requisition is marked as Ex.P-19 and opinion is marked as Ex.P-20 and my signature is at Ex.P-20(a).

**Cross-examination by advocate appearing for the accused person**

It is false to state that the accused was produced before me for personal examination to ascertain if the injury sustained to the deceased over the head is likely to occur if a person is assaulted by hands of the accused. It is true that if a person falls on hard surface the internal injuries sustained to the deceased as mentioned in the PM report are likely to occur. It is false to state that at the instance of police officials, I have furnished false opinion

Re-examination: Nil.
(Typed to my dictation in open court on computer)

R O &A C

Prl. Dist. & Sessions Judge, Bagalkote.

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

**ಸತ್ರ ಮೊಕದ್ದಮೆ ಸಂ. 10/2023**

| | | |
|---|---|---|
| ಹೆಸರು | : ಜನಾರ್ಧನ | ಫ್ರಾಸಾ-20 |
| ತಂದೆಯ ಹೆಸರು | : ನಾಗಪ್ಪ | ಚಾಸಾ-35 |
| ವರ್ಷ | : 31 ವರ್ಷ | |
| ಉದ್ಯೋಗ | : ಪಿ ಎಸ್ ಐ, ನವಲಗುಂದ ಪಿ ಎಸ್ | |
| ವಿಳಾಸ | : ನವಲಗುಂದ | |

ದಿಃ 08.01.2026 ರಂದು ಸಾಕ್ಷಿ ವಿ.ಸಿ ಮೂಲಕ ಹಾಜರಾಗಿದ್ದು, ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕಃ 25.04.2022 ರಿಂದ 10.02.2023 ರವರೆಗೆ ಪಿ ಎಸ್ ಐ ಬಾಗಲಕೋಟೆ ಗ್ರಾಮೀಣ ಪೊಲೀಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 01.12.2022 ರಂದು ಬೆಳಿಗ್ಗೆ10 ಗಂಟೆಗೆ ಠಾಣಾ ಪ್ರಭಾರದಲ್ಲಿ ಈ ಪ್ರಕರಣದ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಅದರ ಆಧಾರದ ಮೇಲೆ ಪ್ರಕರಣವನ್ನು ಠಾಣಾ ಗುನ್ನಾ ನಂ.205/2022 ರಂತೆ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಸಿಬ್ಬಂದಿ/ಚಾಸಾ-26 ರವರ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-23 ಎಂದು, ಸಾಕ್ಷಿ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ಪ್ರಕರಣ ಘೋರ ಸ್ವರೂಪವಾದ್ದರಿಂದ ಈ ಪ್ರಕರಣದ ಮುಂದಿನ ತನಿಖೆಯನ್ನು ಸಿಪಿಐ/ಚಾಸಾ-36 ರವರಿಗೆ ವಹಿಸಿಕೊಟ್ಟಿರುತ್ತೇನೆ.

3. ಅದೇ ದಿನ ಚಾಸಾ-36 ರವರು ಈ ಪ್ರಕರಣದ ಆರೋಪಿತರನ್ನು ಪತ್ತೆ ಮಾಡಿ ಅವರ ಮುಂದೆ ಹಾಜರುಪಡಿಸಿಸುವಂತೆ ನನಗೆ ಜ್ಞಾಪನ ಪತ್ರ ನೀಡಿರುತ್ತಾರೆ. ಸಾಕ್ಷಿ ಸದರಿ ಜ್ಞಾಪನ ಪತ್ರ

ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-24 ಎಂದು, ಸಾಕ್ಷಿ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು. ಅದೇ ದಿನ ನಾನು ನಕ್ಕರಗುಂದಿ ಗುಡ್ಡದ ಹತ್ತಿರ 1 ನೇ ಆರೋಪಿಯನ್ನು ಪತ್ತೆ ಮಾಡಿ ವಶಕ್ಕೆ ಪಡೆದು, ಸಂಜೆ ಸುಮಾರು 5 ಗಂಟೆಗೆ ಚಾಸಾ-36 ರವರ ಮುಂದೆ ನನ್ನ ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ಸದರಿ ವರದಿ ನೋಡಿ ಗುರುತಿಸಿದ್ದು ಅದನ್ನು ನಿಶಾನೆ ಪಿ-25 ಎಂದು, ಸಾಕ್ಷಿ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು. 1 ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. (1 ನೇ ಆರೋಪಿ ಗೈರು ಹಾಜರಿದ್ದು, ಗುರುತಿನ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ).

**ಪಾಟೀ ಸವಾಲುಃ**

ದಿಃ 01.12.2022 ರಂದು ಚಾಸಾ-1 ರವರು ನಮ್ಮ ಠಾಣೆಗೆ ಹಾಜರಾಗಿ ಯಾವುದೇ ದೂರು ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ದೂರು ಮತ್ತು ನಿಪಿ-23/ಪ್ರಥಮ ವರ್ತಮಾನ ವರದಿಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಆತನ ಮನೆಯಿಂದ ಕರೆದುಕೊಂಡು ಹೋಗಿ ಚಾಸಾ-36 ರವರ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 10/2023**

| | | | |
|---|---|---|---|
| ಹೆಸರು | : | ಮಾಯಪ್ಪ ಗೌಡರ | ಪ್ರಾಸಾ-19 |
| ತಂದೆಯ ಹೆಸರು | : | ಮಲ್ಲಪ್ಪ | ಚಾಸಾ-20 |
| ವರ್ಷ | : | 55 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ನಕ್ಕರಗುಂದಿ | |

ದಿಃ 08.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಚಾಸಾ-1/ತಾಯವ್ವ, ಮೃತ ರಂಗವ್ವ, 1 ಮತ್ತು 2 ನೇ ಆರೋಪಿ, ಚಾಸಾ-16 ಮತ್ತು 17 ರವರು ನನಗೆ ಗೊತ್ತು. (1 ನೇ ಆರೋಪಿ ಗೈರು ಹಾಜರಿದ್ದು, ಗುರುತಿನ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ).

2. 1 ನೇ ಆರೋಪಿ ಮತ್ತು ಮೃತ ರಂಗವ್ವ ರವರು ಮದುವೆ ನಂತರ ಹೇಗೆ ಸಂಸಾರ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಅವರ ಸಂಸಾರದ ವಿಚಾರದಲ್ಲಿ ಅವರುಗಳಿಗೆ ಯಾವುದೇ ಬುದ್ದಿವಾದ ಹೇಳಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

## ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ಮೃತ ರಂಗವ್ವ ರವರಿಗೆ ಮೈಯಲ್ಲಿ ಅರಾಮವಿಲ್ಲದ ಕಾರಣ ಕೂಲಿ ಕೆಲಸಕ್ಕೆ ಹೋಗದೆ ಇದ್ದ ಕಾರಣದಿಂದ ಹಾಗೂ ಮನೆಯಲ್ಲಿ ಸರಿಯಾಗಿ ಅಡುವೆ ಮಾಡಲು ಬರುವುದಿಲ್ಲ ಎಂದು ಆರೋಪಿತರಿಬ್ಬರೂ ರಂಗವ್ವಳಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ತೊಂದರೆ ಕೊಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿ ಪ್ರತಿನಿತ್ಯವೂ ಸರಾಯಿ ಕುಡಿದು ರಂಗವ್ವಳಿಗೆ ಹೊಡಿಬಡಿ ಮಾಡುತ್ತಿದ್ದನು ಮತ್ತು 2 ನೇ ಆರೋಪಿ ಸಹ ಪ್ರಚೋದನೆ ಮಾಡುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಆರೋಪಿತರಿಗೆ 20 ಗುಂಟೆ ಜಮೀನನ್ನು ಕೊಟ್ಟಿದ್ದರೂ ಸಹ ಆರೋಪಿತರು ರಂಗವ್ವಳಿಗೆ ಕಿರುಕುಳ ಕೊಡುವದನ್ನು ಬಿಟ್ಟಿರಲಿಲ್ಲ ಎಂದರೆ ಸರಿಯಲ್ಲ.

2. ದಿಃ 30.11.2022 ರಂದು ರಾತ್ರಿ 11 ಗಂಟೆಗೆ ಸುಮಾರಿಗೆ ನಾನು ನಮ್ಮ ಊರಿನಲ್ಲಿದ್ದಾಗ 1 ನೇ ಆರೋಪಿ ಮಳಿಯಪ್ಪ ರಾತ್ರಿ 10 ಗಂಟೆ ಸುಮಾರಿಗೆ ಮೃತ ರಂಗವ್ವಳಿಗೆ ಕೈಯಿಂದ ಹೊಡೆದಿದ್ದರಿಂದ ಒಳಪೆಟ್ಟು ಗಾಯವಾಗಿ ಬಿದ್ದಿರುತ್ತಾಳೆ ಮತ್ತು ಆರೋಪಿ 1 ಮತ್ತು 2 ರವರು ಸೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಮೃತಪಟ್ಟಿರುತ್ತಾಳೆ ಎಂದು, ಶವ ಬೀಳಗಿ ಆಸ್ಪತ್ರೆಯಲ್ಲಿ ಇರುತ್ತದೆ ಎಂದು ವಿಷಯ ತಿಳಿದುಬಂದಿತು ಎಂದರೆ ಸರಿಯಲ್ಲ. ನಂತರ ನಾನು, ಚಾಸಾ-19, ಚಾಸಾ-21, 23 ಮತ್ತು 24 ರವರು ಸೇರಿ ಬೀಳಗಿ ಆಸ್ಪತ್ರೆಗೆ ಹೋಗಿ ರಂಗವ್ವಳ ಶವ ನೋಡಿದಾಗ ಆಕೆಯ ಮೂಗಿನ ಮೇಲೆ, ಹಣೆಯ ಎಡಭಾಗ ದಲ್ಲಿ ಬಾವು ಇತ್ತು ಹಾಗೂ ಹಣೆಯ ಎಡಭಾಗ ಮತ್ತು ಎಡಗಣ್ಣಿನ ಹತ್ತಿರ ಗಾಯದ ಕಲೆಗಳು ಕಂಡುಬಂದಿರುತ್ತವೆ ಎಂದರೆ ಸರಿಯಲ್ಲ. ನಂತರ ಸದರಿ ವಿಷಯವನ್ನು ನಮ್ಮ ಊರಿನ ಹಿರಿಯರು ಚಾಸಾ-1 ರವರಿಗೆ ಕರೆ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಘಟನೆ ಬಗ್ಗೆ ಚಾಸಾ-12 ಮತ್ತು 13 ರವರಿಗೆ ವಿಚಾರಿಸಿದಾಗ ದಿಃ 30.11.2022 ರಂದು ಬೆಳಿಗ್ಗೆ 2 ನೇ ಆರೋಪಿ/ಭೀಮವ್ವ ಮನೆಯಲ್ಲಿಟ್ಟಿದ್ದ ರೂ.40 ಗಳನ್ನು ಮೃತ ರಂಗವ್ವ ಕಳ್ಳತನ ಮಾಡಿರುತ್ತಾಳೆ ಎಂದು ಜಗಳ ಮಾಡಿ, ರಾತ್ರಿ 1 ನೇ ಆರೋಪಿ ಸರಾಯಿ ಕುಡಿದು ಮನೆಗೆ ಬಂದಾಗ ಆತನಿಗೆ ನಿನ್ನ ಹೆಂಡತಿ ರೂ.40/- ಕಳ್ಳತನ ಮಾಡಿರುತ್ತಾಳೆ ಅಂತಾ ಹೇಳಿದ್ದು, ಆಗ 1 ನೇ ಆರೋಪಿ ರಂಗವ್ವಳಿಗೆ ಏಕೆ ಕಳ್ಳತನ ಮಾಡಿರುತ್ತಿ ಎಂದು ಕೇಳಿದಾಗ, ರಂಗವ್ವಳು ಆಕೆ ಕಳ್ಳತನ ಮಾಡಿರುವುದಿಲ್ಲ ಎಂದು ಹೇಳಿದಾಗ 1 ನೇ ಆರೋಪಿ ಸಿಟ್ಟಿಗೆದ್ದು ತನ್ನ ಕೈಗಳಿಂದ ಆಕೆಯ ಬೆನ್ನಿಗೆ ಮತ್ತು ತಲೆಯ ಎಡಭಾಗಕ್ಕೆ ಬಲವಾಗಿ ಹೊಡೆದಿದ್ದರಿಂದ ಆಕೆ ಪ್ರಜ್ಞೆ ತಪ್ಪಿ ಕೆಳಗೆ ಬಿದ್ದಿರುತ್ತಾಳೆ, ಜಗಳದ ಬಾಯಿಸಪ್ಪಳ ಕೇಳಿ ಚಾಸಾ-14 ಮತ್ತು 15 ರವರು ಸ್ಥಳಕ್ಕೆ ಹೋಗಿ ಆಕೆಯನ್ನು ಎಬ್ಬಿಸಿ ನೀರು ಕುಡಿಸಲು ಪ್ರಯತ್ನಿಸಿದಾಗ ಆಕೆ

ಎಚ್ಚರಗೊಳ್ಳದಿದ್ದರಿಂದ 1 ಮತ್ತು 2 ನೇ ಆರೋಪಿತರಿಗೆ ರಂಗವ್ವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುವುದಾಗಿ ನಮಗೆ ತಿಳಿಸಿದ್ದು, ನಂತರ 1 ಮತ್ತು 2 ನೇ ಆರೋಪಿತರು ದ್ವಿಚಕ್ರ ವಾಹನದಲ್ಲಿ ರಂಗವ್ವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಂಗವ್ವ ದಾರಿ ಮಧ್ಯ ಮೃತಪಟ್ಟ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ರಂಗವ್ವಳಿಗೆ ಹೊಡೆದಿದ್ದರಿಂದ ಹಾಗೂ 2 ನೇ ಆರೋಪಿ ಆ ಸಮಯದಲ್ಲಿ ಪ್ರಚೋದನೆ ಮಾಡಿದ್ದರಿಂದ ಆಕೆಯ ಸಾವಿಗೆ ಆರೋಪಿತರೆ ಕಾರಣ ಎಂದರೆ ನನಗೆ ಗೊತ್ತಿಲ್ಲ.

3. ಈ ವಿಚಾರವಾಗಿ ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ನನ್ನ ಊರು ನಕ್ಕರಗುಂದಿ........ ಒಳಪೆಟ್ಟುಪಡಿಸಿ ಕೊಲೆ ಮಾಡಿರುತ್ತಾರೆ'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-22 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

**ಸತ್ರ ಮೊಕದ್ದಮೆ ಸಂ. 10/2023**

| | | |
|---|---|---|
| ಹೆಸರು | : ಶೇಖಪ್ಪ ಸಣ್ಣಗೌಡರ | ಫಿರ್ಯಾಸಾ-18 |
| ತಂದೆಯ ಹೆಸರು | : ಸಾಬಣ್ಣ | ಚಾಸಾ-5 |
| ವರ್ಷ | : 27 ವರ್ಷ | |
| ಉದ್ಯೋಗ | : ಖಾಸಗಿ ಕೆಲಸ | |
| ವಿಳಾಸ | : ನಕ್ಕರಗುಂದಿ | |

ದಿಃ 08.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಚಾಸಾ-5/ತಾಯವ್ವ ನನ್ನ ಚಿಕ್ಕಮ್ಮ. ಮೃತ ರಂಗವ್ವ ನನ್ನ ಅಕ್ಕ. 1 ನೇ ಆರೋಪಿ/ಮಳಿಯಪ್ಪ ನನ್ನ ಅಕ್ಕ ರಂಗವ್ವಳ ಗಂಡ. (1 ನೇ ಆರೋಪಿ ಗೈರು ಹಾಜರಿದ್ದು, ಗುರುತಿನ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ). 2 ನೇ ಆರೋಪಿತಳು 1 ನೇ ಆರೋಪಿತನ ತಾಯಿ. ಚಾಸಾ-16/ಜ್ಯೋತಿ, ಚಾಸಾ-17/ರಂಗಪ್ಪ ಮೃತ ರಂಗವ್ವ ಮತ್ತು 1 ನೇ ಆರೋಪಿತನ ಮಕ್ಕಳು.

2. 1 ನೇ ಆರೋಪಿ ಮತ್ತು ನನ್ನ ಅಕ್ಕ ಮೃತ ರಂಗವ್ವ ಮದುವೆ ನಂತರ ಅನೋನ್ಯವಾಗಿದ್ದರು. ಅವರ ನಡುವೆ ಯಾವುದಾದರೂ ಗಲಾಟೆ ಇತ್ತೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಸುಮಾರು 3 ವರ್ಷಗಳ ಹಿಂದೆ ಮೃತ ರಂಗವ್ವ ರವರಿಗೆ ತಲೆಗೆ ಪೆಟ್ಟಾಗಿರುತ್ತದೆ ಎಂದು ತಿಳಿದು ಆಸ್ಪತ್ರೆಗೆ ನೋಡಲು ಹೋಗಿದ್ದೆ. ನಾನು ಆಸ್ಪತ್ರೆಗೆ ಹೋಗುವಷ್ಟರಲ್ಲಿ ರಂಗವ್ವ ಮೃತಪಟ್ಟಿದ್ದರು. ನನ್ನ ಅಕ್ಕ ಮೃತ ರಂಗವ್ವ ರವರಿಗೆ ತಲೆಗೆ ಹೇಗೆ ಪೆಟ್ಟಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ಘಟನೆ ಬಗ್ಗೆ ನಾನು ಯಾವುದೇ ವಿಚಾರ ಕೇಳಿ ತಿಳಿದುಕೊಂಡಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

## ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ನನ್ನ ಅಕ್ಕ ಮೃತ ರಂಗವ್ವ ರವರಿಗೆ ಮೈಯಲ್ಲಿ ಅರಾಮವಿಲ್ಲದ ಕಾರಣ ಕೂಲಿ ಕೆಲಸಕ್ಕೆ ಹೋಗದೆ ಇದ್ದ ಕಾರಣದಿಂದ ಹಾಗೂ ಮನೆಯಲ್ಲಿ ಸರಿಯಾಗಿ ಅಡುವೆ ಮಾಡಲು ಬರುವುದಿಲ್ಲ ಎಂದು ಆರೋಪಿತರಿಬ್ಬರೂ ನನ್ನ ಅಕ್ಕಳಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ತೊಂದರೆ ಕೊಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿ ಪ್ರತಿನಿತ್ಯವೂ ಸರಾಯಿ ಕುಡಿದು ರಂಗವ್ವಳಿಗೆ ಹೊಡಿಬಡಿ ಮಾಡುತ್ತಿದ್ದನು ಮತ್ತು 2 ನೇ ಆರೋಪಿ ಸಹ ಪ್ರಚೋದನೆ ಮಾಡುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಚಾಸಾ-1 ರವರು ಆರೋಪಿತರಿಗೆ 20 ಗುಂಟೆ ಜಮೀನನ್ನು ಕೊಟ್ಟಿದ್ದರೂ ಸಹ ಆರೋಪಿತರು ರಂಗವ್ವಳಿಗೆ ಕಿರುಕುಳ ಕೊಡುವದನ್ನು ಬಿಟ್ಟಿರಲಿಲ್ಲ ಎಂದರೆ ಸರಿಯಲ್ಲ.

2. ದಿಃ 30.11.2022 ರಂದು ರಾತ್ರಿ 11 ಗಂಟೆಗೆ ಸುಮಾರಿಗೆ ನಾನು ನಮ್ಮ ಮನೆಯಲ್ಲಿದ್ದಾಗ 1 ನೇ ಆರೋಪಿ ಮಳಿಯಪ್ಪ ರಾತ್ರಿ 10 ಗಂಟೆ ಸುಮಾರಿಗೆ ಮೃತ ರಂಗವ್ವಳಿಗೆ ಕೈಯಿಂದ ಹೊಡೆದಿದ್ದರಿಂದ ಒಳಪೆಟ್ಟು ಗಾಯವಾಗಿ ಬಿದ್ದಿರುತ್ತಾಳೆ ಮತ್ತು ಆರೋಪಿ 1 ಮತ್ತು 2 ರವರು ಸೇರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಮೃತಪಟ್ಟಿರುತ್ತಾಳೆ ಎಂದು, ಶವ ಬೀಳಗಿ ಆಸ್ಪತ್ರೆಯಲ್ಲಿ ಇರುತ್ತದೆ ಎಂದು ವಿಷಯ ತಿಳಿದುಬಂದಿತು ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ರಂಗವ್ವಳ ಶವ ನೋಡಿದಾಗ ಆಕೆಯ ಮೂಗಿನ ಮೇಲೆ, ಹಣೆಯ ಎಡಭಾಗ ದಲ್ಲಿ ಬಾವು ಇತ್ತು ಹಾಗೂ ಹಣೆಯ ಎಡಭಾಗ ಮತ್ತು ಎಡಗಣ್ಣಿನ ಹತ್ತಿರ ಗಾಯದ ಕಲೆಗಳು ಕಂಡುಬಂದಿರುತ್ತವೆ ಎಂದರೆ ಸರಿಯಲ್ಲ. ನಂತರ ಸದರಿ ವಿಷಯವನ್ನು ನಮ್ಮ ಊರಿನ ಹಿರಿಯರು ಚಾಸಾ-1 ರವರಿಗೆ ಕರೆ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ಘಟನೆ ಬಗ್ಗೆ ಚಾಸಾ-12 ಮತ್ತು 13 ರವರಿಗೆ ವಿಚಾರಿಸಿದಾಗ ದಿಃ 30.11.2022 ರಂದು ಬೆಳಿಗ್ಗೆ 2 ನೇ ಆರೋಪಿ/ಭೀಮವ್ವ ಮನೆಯಲ್ಲಿಟ್ಟಿದ್ದ ರೂ.40 ಗಳನ್ನು ಮೃತ ರಂಗವ್ವ ಕಳ್ಳತನ ಮಾಡಿರುತ್ತಾಳೆ ಎಂದು ಜಗಳ ಮಾಡಿ, ರಾತ್ರಿ 1 ನೇ ಆರೋಪಿ ಸರಾಯಿ ಕುಡಿದು ಮನೆಗೆ ಬಂದಾಗ ಆತನಿಗೆ ನಿನ್ನ ಹೆಂಡತಿ ರೂ.40/- ಕಳ್ಳತನ ಮಾಡಿರುತ್ತಾಳೆ ಅಂತಾ ಹೇಳಿದ್ದು, ಆಗ 1 ನೇ ಆರೋಪಿ ರಂಗವ್ವಳಿಗೆ ಏಕೆ ಕಳ್ಳತನ ಮಾಡಿರುತ್ತಿ ಎಂದು ಕೇಳಿದಾಗ, ರಂಗವ್ವಳು ಆಕೆ ಕಳ್ಳತನ ಮಾಡಿರುವುದಿಲ್ಲ ಎಂದು ಹೇಳಿದಾಗ 1 ನೇ ಆರೋಪಿ ಸಿಟ್ಟಿಗೆದ್ದು ತನ್ನ ಕೈಗಳಿಂದ ಆಕೆಯ ಬೆನ್ನಿಗೆ ಮತ್ತು ತಲೆಯ ಎಡಭಾಗಕ್ಕೆ ಬಲವಾಗಿ ಹೊಡೆದಿದ್ದರಿಂದ ಆಕೆ ಪ್ರಜ್ಞೆ ತಪ್ಪಿ ಕೆಳಗೆ ಬಿದ್ದಿರುತ್ತಾಳೆ, ಜಗಳದ ಬಾಯಿಸಪ್ಪಳ ಕೇಳಿ ಚಾಸಾ-14 ಮತ್ತು 15 ರವರು ಸ್ಥಳಕ್ಕೆ ಹೋಗಿ ಆಕೆಯನ್ನು ಎಬ್ಬಿಸಿ ನೀರು ಕುಡಿಸಲು ಪ್ರಯತ್ನಿಸಿದಾಗ ಆಕೆ ಎಚ್ಚರಗೊಳ್ಳದಿದ್ದರಿಂದ 1 ಮತ್ತು 2 ನೇ ಆರೋಪಿತರಿಗೆ ರಂಗವ್ವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುವುದಾಗಿ ನಮಗೆ ತಿಳಿಸಿದ್ದು, ನಂತರ

1 ಮತ್ತು 2 ನೇ ಆರೋಪಿತರು ದ್ವಿಚಕ್ರ ವಾಹನದಲ್ಲಿ ರಂಗವ್ವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ರಂಗವ್ವ ದಾರಿ ಮಧ್ಯ ಮೃತಪಟ್ಟ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ರಂಗವ್ವಳಿಗೆ ಹೊಡೆದಿದ್ದರಿಂದ ಹಾಗೂ 2 ನೇ ಆರೋಪಿ ಆ ಸಮಯದಲ್ಲಿ ಪ್ರಚೋದನೆ ಮಾಡಿದ್ದರಿಂದ ಆಕೆಯ ಸಾವಿಗೆ ಆರೋಪಿತರೆ ಕಾರಣ ಎಂದರೆ ನನಗೆ ಗೊತ್ತಿಲ್ಲ.

3. ಈ ವಿಚಾರವಾಗಿ ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ನನ್ನ ಊರು ನಕ್ಕರಗುಂದಿ........ ಒಳಪೆಟ್ಟು ಪಡಿಸಿ ಕೊಲೆ ಮಾಡಿರುತ್ತಾರೆ'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-21 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .